ವಿಷಯ :- ಕಿರಿಯ ಆರೋಗ್ಯ ಸಹಾಯಕಿಯರ ನೇಮಕಾತಿ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1333 (1850)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ದಕ್ಷಿಣ ಕನ್ನಡ ಜಿಲ್ಲೆಯ ಕಿರಿಯ ಆರೋಗ್ಯ ಸಹಾಯಕಿಯರ ನೇಮಕಾತಿ ಬಗ್ಗೆ ಮಂಗಳೂರಿನಲ್ಲಿ ಸಂದರ್ಶನ ಮುಗಿದಿದ್ದು ಇವರ ನೇಮಕಾತಿಯನ್ನು ಯಾವಾಗ ಮಾಡಲಾಗುವುದು ?
2. ಈ ಸಂದರ್ಶನದಲ್ಲಿ ಅಭ್ಯರ್ಥಿಗಳ ಆಯ್ಕೆಯಲ್ಲಿ ನೀತಿ ನಿಯಮಗಳನ್ನು ಉಲ್ಲಂಘಿಸಿರುವ ಬಗ್ಗೆ ದೂರುಗಳಿರುವುದಾಗಿ ಕೇಳಿ ಬರುತ್ತಿರುವುದು ನಿಜವೇ ?
3. ನಿಜವಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು)

1. ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕೊಡಲು ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಬಗ್ಗೆ ಸಂದರ್ಶನವು ಮಂಗಳೂರಿನಲ್ಲಿ ಮುಗಿದಿರುತ್ತದೆ. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ವರದಿಗಳು ಬಂದ ಕೂಡಲೇ ಅವುಗಳನ್ನು ಕೂಲಂಕುಷವಾಗಿ ತೆಗೆದುಕೊಳ್ಳಲು ಆದೇಶ ಹೊರಡಿಸಲಾಗುವುದು.
2. ಈವರೆವಿಗೆ ಯಾವುದೇ ದೂರು ಬಂದಿರುವುದಿಲ್ಲ.
3. ಉದ್ಭವಿಸುವುದಿಲ್ಲ.

ವಿಷಯ:- ಜಯ ಚಾಮರಾಜೇಂದ್ರ ಭಾರತೀಯ ವೈದ್ಯಕೀಯ ಸಂಸ್ಥೆಯಲ್ಲಿ ಧರ್ಮಶಾಲೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1335 (1826)

ಶ್ರೀ ಪೆರಿಕಲ್. ಎಂ. ಮಲ್ಲಪ್ಪ (ಚಿಕ್ಕಪೇಟೆ ಕ್ಷೇತ್ರ) ಮಾನ್ಯ ಆರೋಗ್ಯ ಮಂತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ಶ್ರೀ ಜಯಚಾಮರಾಜೇಂದ್ರ ಭಾರತೀಯ ವೈದ್ಯಕೀಯ ಸಂಸ್ಥೆಯಲ್ಲಿ ಹಾಸಿಗೆಗಳ ಸಂಖ್ಯೆ ಎಷ್ಟು ?
2. ಒಳರೋಗಿಗಳನ್ನು ನೋಡಿಕೊಳ್ಳಲು ಬರುವವರಿಗೆ ಧರ್ಮ ಶಾಲೆ ಇದೆಯೆ?
3. ಇಲ್ಲವಾದಲ್ಲಿ ಈ ಆಸ್ಪತ್ರೆಯ ಆವರಣದಲ್ಲಿ ಸಾಕಾಗುವಷ್ಟು ಜಾಗ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?
4. ಸರ್ಕಾರದ ಧರ್ಮಶಾಲೆಯನ್ನು ಕಟ್ಟಿಸಲು ಮತ್ತು ಡಾಕ್ಟರುಗಳಿಗೆ, ನರ್ಸ್‌ಗಳಿಗೆ ವಸತಿ ಗೃಹಗಳನ್ನು ಕಟ್ಟಿಸಲು ಕ್ರಮ ಕೈಗೊಂಡಿದೆಯೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1. 315 ಹಾಸಿಗೆಗಳ ಸೌಲಭ್ಯವಿರುತ್ತದೆ.
2. ಇಲ್ಲ
3. ಆಸ್ಪತ್ರೆಯ ಆವರಣದಲ್ಲಿ ಹೆಚ್ಚಿನ ಜಾಗ ಖಾಲಿ ಇರುವುದಿಲ್ಲ.
4. ಈಗಿರುವ ಜಾಗದಲ್ಲಿ ಆಸ್ಪತ್ರೆಯ ಡಾಕ್ಟರುಗಳಿಗೆ ಮತ್ತು ಸಿಬ್ಬಂದಿಗೆ ವಸತಿಗೃಹಗಳನ್ನು ಕಟ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈಗ ಸದ್ಯಕ್ಕೆ ಧರ್ಮ ಶಾಲೆಯ ಅವಶ್ಯಕತೆ ಇರುವುದಿಲ್ಲ.

ವಿಷಯ :- ಗ್ಯಾಸೈಟ್ ಕಲ್ಲುಗಳ ಅಕ್ರಮ ಗಣಿಗಾರಿಕೆ ಮತ್ತು ಸಾಗಾಣಿಕೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1336 (1842)

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಗ್ರಾನೈಟ್ ಕಲ್ಲುಗಳ ಅಕ್ರಮ ಗಣಿಗಾರಿಕೆ ಮತ್ತು ಸಾಗಾಣಿಕೆ ನಡೆಯುತ್ತಿರುವುದು ನಿಜವಲ್ಲವೇ ?

ಆ) ಇದನ್ನು ತಡೆಗಟ್ಟಲು ಸರ್ಕಾರ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದೆಯೇ ? ಹಾಗಿದ್ದರೆ ಅದರ ವಿವರಗಳನ್ನು ನೀಡುವುದು ?

ಇ) ಸರ್ಕಾರಕ್ಕೆ ಗ್ರಾನೈಟ್ ಗುತ್ತಿಗೆಯಿಂದ 1987-88, 1988-89, 1989-90, 1990 91ರಲ್ಲಿ ಎಷ್ಟು ಆದಾಯ ಬಂದಿರುತ್ತದೆ. (ವಿವರ ಒದಗಿಸುವುದು)

ಈ) ಗುಪ್ತವಾಗಿ ಅಕ್ರಮದಿಂದ ಗ್ರಾನೈಟ್ ಸಾಗಿಸುತ್ತಿರುವುದನ್ನು ನಿಲ್ಲಿಸಲು ಕ್ರಮ ತೆಗೆದುಕೊಂಡು ಯಾರಿಗಾದರೂ ಶಿಕ್ಷೆ ಅಥವಾ ದಂಡ ವಿಧಿಸಲಾಗಿದೆಯೇ ?

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು)

ಅ) ಕೆಲವೊಂದು ಪ್ರಕರಣಗಳು ಗಮನಕ್ಕೆ ಬಂದಿವೆ.

ಆ) ಅನಧಿಕೃತ ಗ್ರಾನೈಟ್ ಗಣಿಗಾರಿಕೆ ಹಾಗೂ ಸಾಗಾಣಿಕೆಯನ್ನು ತಡೆಯಲು ಗ್ರಾನೈಟ್ ನಿಕ್ಷೇಪದ ಸ್ಥಳಗಳಿಗೆ ಅನಿರೀಕ್ಷಿತ ದಾಳಿ ನಡೆಸಿ, ದಿಮ್ಮಿಗಳನ್ನು ಜಪ್ತಿ ಮಾಡಲಾಗುತ್ತಿದೆ. ಮಂಗಳೂರಿನ ಬಳಿ 4 ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದ್ದು, ಖನಿಜ ರವಾನೆಯ ಮೇಲೆ ನಿಗಾ ಇಡಲಾಗಿದೆ. ಖನಿಜ ರವಾನೆ ಪರ್ಮಿಟ್‌ನ್ನು ಕಡ್ಡಾಯಗೊಳಿಸಲಾಗಿದ್ದು, ಪರ್ಮಿಟ್ ಇಲ್ಲದ ಗ್ರಾನೈಟ್ ದಿಮ್ಮಿಗಳಿಗೆ ರಾಜಧನದ ಐದರಷ್ಟನ್ನು ದಂಡವನ್ನಾಗಿ ವಸೂಲಿ ಮಾಡಲಾಗುತ್ತಿದೆ. ಕಾರವಾರದ ಬಂದರಿನಲ್ಲಿ ಪ್ರತಿ ಗ್ರಾನೈಟ್ ದಿಮ್ಮಿಗಳನ್ನು ಪರ್ಮಿಟ್ ಹೊಂದಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ತಪಾಸಣೆ ಮಾಡಲಾಗುತ್ತಿದೆ. ಮಂಗಳೂರು ಬಂದರಿನಲ್ಲಿ ಎರಡನೇ ಬಾರಿಗೆ ರಫ್ತಾಗುವ ಮುನ್ನ ತಪಾಸಣೆಗೆ ಒಳಪಡಿಸಲು ಕಣಿ ಮತ್ತು ಭೂ ವಿಜ್ಞಾನ ಅಧಿಕಾರಿಗಳಿಗೆ ಅಧಿಕಾರ ನೀಡುವಂತೆ ಬಂದರು ಪ್ರಾಧಿಕಾರವನ್ನು ಕೋರಲಾಗಿದೆ. ಅಲ್ಲದೆ ವಾಣಿಜ್ಯ ತೆರಿಗೆ ಇಲಾಖೆಯ ಹಾಲಿ ಇರುವ ಚೆಕ್ ಪೋಸ್ಟ್‌ನ ಅಧಿಕಾರಿಗಳಿಗೆ ಖನಿಜ ರವಾನೆಯ ವಾಹನಗಳನ್ನು ತಪಾಸಣೆ ಮಾಡಲು ಮತ್ತು ದಂಡ ವಸೂಲಿ ಮಾಡಲು ಅಧಿಕಾರ ನೀಡುವ ಯೋಚನೆ ಸರ್ಕಾರಕ್ಕಿದೆ. ಕಂದಾಯ ಇಲಾಖೆಯ ಅಧಿಕಾರಿಗಳಿಗೂ ತಪಾಸಣೆ ಮಾಡುವ ಜಪ್ತಿ ಮಾಡುವ ಹಾಗೂ ದಂಡ ವಸೂಲಿ ಮಾಡುವ ಅಧಿಕಾರವನ್ನು ಕೆ. ಎಂ. ಎಂ. ಸಿ. ಆರ್. ನಿಯಮಾವಳಿ 1969 ರಡಿಯಲ್ಲಿ ನೀಡಲಾಗಿದೆ. ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಅನಧಿಕೃತ ಚಟುವಟಿಕೆಗಳನ್ನು ತಡೆಯಲು ತೆಗೆದುಕೊಳ್ಳಲಾಗುತ್ತಿದೆ.

ಇ) ಸರ್ಕಾರಕ್ಕೆ 1987 ರಿಂದ ಗ್ರಾನೈಟ್ ರಫ್ತಿನಿಂದ ಬಂದ ರಾಜಧನದ ವಿವರ ಕೆಳಗಿನಂತಿದೆ :

1987-88	27.98 ಲಕ್ಷಗಳು
1988-89	60.17 ಲಕ್ಷಗಳು
1989-90	56.92 ಲಕ್ಷಗಳು
1990-91	133.00 ಲಕ್ಷಗಳು
1991-92	240.00 ಲಕ್ಷಗಳು
(ಫೆಬ್ರುವರಿ ವರೆಗೆ)	

ಈ) ಶಿಕ್ಷೆಯಾಗಿಲ್ಲ. ಆದರೆ ದಂಡ ವಿಧಿಸಲಾಗಿದೆ.